# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 268(199) |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ |
| ಉತ್ತರಿಸಬೇಕಾದ ದಿನಾಂಕ | : | 12.08.2025 |
| ಉತ್ತರಿಸುವವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಖಾತಾ ಕಡ್ಡಾಯಗೊಳಿಸಲಾಗಿದೆಯೇ: (ವಿವರ ನೀಡುವುದು) | ಹೌದು.<br>ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:DMA/ 29/ PTIS/ 2015-16, ದಿನಾಂಕ:20-04-2016ರಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಲಾದ ಇ-ಆಸ್ತಿ ತಂತ್ರಾಂಶವನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರಾಯುಕ್ತರು/ ಮುಖ್ಯಾಧಿಕಾರಿಗಳ ಡಿಜಿಟಲ್ ಸಹಿಯುಳ್ಳ ನಮೂನೆ-3 ನ್ನು ಕಡ್ಡಾಯವಾಗಿ ತಂತ್ರಾಂಶದಿಂದ ಸೃಜಿಸಿ ಖಾತೆ ನೀಡಲು ಹಾಗೂ ಕೈ ಬರಹದ ಸಹಿಯುಳ್ಳ ನಮೂನೆ-3 ನ್ನು ನಾಗರೀಕರಿಗೆ ದಿನಾಂಕ:02-05-2016 ರಿಂದ ನೀಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ **(ಅನುಬಂಧ-1).** ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ನಅಇ/ 02/ ಎಂಎನ್‌ಇ/ 2019-ಇ, ದಿನಾಂಕ:17-06-2019 ರನ್ವಯ 10 ಮಹಾನಗರ ಪಾಲಿಕೆಗಳನ್ನು ಒಳಗೊಂಡಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಆಸ್ತಿ ತಂತ್ರಾಂಶದ ಮುಖೇನ ಖಾತೆಗಳನ್ನು ನೀಡಲು ಮತ್ತು ಆಸ್ತಿಗಳ ಮಾಲಿಕತ್ವ ಹಕ್ಕು ಬದಲಾವಣೆ ಮಾಡಲು ನಿರ್ದೇಶಿಸಲಾಗಿದೆ **(ಅನುಬಂಧ-2).** |
| ಆ | ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಆದೇಶದಂತೆ ಒಸಿ. ಸಿ.ಸಿ. ಪಡೆಯದಿರುವ ಕಟ್ಟಡಗಳಿಗೆ ಮೂಲ ಸೌಕರ್ಯ ನೀಡುವ ಕುರಿತುಸರ್ಕಾರದ ನಿಲುವೇನು: ಎಷ್ಟು ಮನೆಗಳಿಗೆ ಮೂಲಭೂತ ಸೌಕರ್ಯ ಒದಗಿಸಿರುವುದಿಲ್ಲ? (ಜಿಲ್ಲಾವಾರು ವಿವರ ನೀಡುವದು)) | ಘನ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: 36440/2024, ದಿನಾಂಕ:17-12-2024 (**ಅನುಬಂಧ-3**)ರಂತೆ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ದಿನಾಂಕ:01-03-2025 ರಂತೆ ಕಟ್ಟಡ ನಿರ್ಮಾಣ ಮಾಡಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ವಾಸ ಯೋಗ್ಯ ಪ್ರಮಾಣ ಪತ್ರ ಪಡೆದ ನಂತರವೇ ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕಗಳನ್ನು ನೀಡಲು ಅವಕಾಶವಿರುತ್ತದೆ (**ಅನುಬಂಧ-4**).<br><br>ಅಂದಾಜು ಒಟ್ಟು 24944 ವಾಸ ಯೋಗ್ಯ ಪ್ರಮಾಣ ಪತ್ರ ಪಡೆಯದ ಕಟ್ಟಡಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವುದಿಲ್ಲ. ಜಿಲ್ಲಾವಾರು ವಿವರವನ್ನು **ಅನುಬಂಧ-5** ರಲ್ಲಿ ಲಗತ್ತಿಸಿದೆ. |

ಇ-ಸಂಖ್ಯೆ: ನಅಇ 185 ಜಿಇಎಲ್ 2025

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

ಕರ್ನಾಟಕ ಸರ್ಕಾರ

[illegible]
[illegible]
[illegible], 6ನೇ ಮಹಡಿ, [illegible]
ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು-560 010, ದಿನಾಂಕ: [illegible].08.200[illegible]

<u>ಸುತ್ತೋಲೆ</u>

ವಿಷಯ: ಹೊಸದಾಗಿ ಅಭಿವೃದ್ಧಿಪಡಿಸಲಾದ ಇ-ಆಸ್ತಿ ತಂತ್ರಾಂಶವನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉಪಯೋಗಿಸುವ ಕುರಿತು.

ಉಲ್ಲೇಖ: 1) ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ ಪೌನಿ:[illegible] 194:2003-04, ದಿನಾಂಕ: 31-05-2004.

2) ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಪೌನಿ:ಸ್ವಘೋಷಣೆ:[illegible]:2003-04 ದಿನಾಂಕ: 08-10-2003

.........

ಪೌರ ಸುಧಾರಣಾ ಕೋಶದಿಂದ ರಾಷ್ಟ್ರೀಯ ಸೂಚ್ಯಾಂಕ ಕೇಂದ್ರದ ಸಹಯೋಗದೊಂದಿಗೆ ಇ-ಆಸ್ತಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಇನ್ನು ಕೆಲವೇ ದಿನಗಳಲ್ಲಿ ಈ ತಂತ್ರಾಂಶವನ್ನು ಬಿಡುಗಡೆ ಮಾಡಲಾಗುವುದು. ಈ ತಂತ್ರಾಂಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಧಿಕೃತ, ಅಧಿಕೃತವಲ್ಲದ ಮತ್ತು ಅಕ್ರಮ ಆಸ್ತಿಗಳ ಮಾಹಿತಿಯನ್ನು ದಾಖಲಿಸಲು/ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಲಾಗಿದೆ ಮತ್ತು ಈ ತಂತ್ರಾಂಶದಿಂದ ಆಸ್ತಿ ತೆರಿಗೆ ವಹಿ (ನಮೂನೆ-3)ಯನ್ನು ಪೌರಾಯುಕ್ತರು/ಮುಖ್ಯಾಧಿಕಾರಿಗಳ ಡಿಜಿಟಲ್ ಸಹಿಯೊಂದಿಗೆ ಸೃಜಿಸಿ ಅಧಿಕೃತ ಮತ್ತು ಅಧಿಕೃತವಲ್ಲದ ಆಸ್ತಿಗಳಿಗೆ ನೀಡಬಹುದಾಗಿರುತ್ತದೆ.

ಈಗಾಗಲೇ ನಿರ್ಮಲ ನಗರ/ಕರ್ನಾಟಕ ಪೌರ ಸುಧಾರಣಾ ಯೋಜನೆಯಡಿ ಸರ್ವೆ ಮಾಡಿದ ಆಸ್ತಿಗಳ ಮಾಹಿತಿಗಳೂ ಕೂಡ ಇ-ಆಸ್ತಿ ತಂತ್ರಾಂಶದಲ್ಲಿ ಲಭ್ಯವಾಗಲಿದೆ. ಆಸ್ತಿಗಳ ಸರ್ವೆ ಸಮಯದಲ್ಲಿ ಎಂ.ಎ.ಆರ್ – 19 ದಾಖಲೆಯಲ್ಲಿ ಲಭ್ಯವಿದ್ದ ಆಸ್ತಿಗಳನ್ನು ಅಧಿಕೃತ ಆಸ್ತಿಗಳೆಂದು ಪರಿಗಣಿಸಲಾಗಿದ್ದು, ಇ-ಆಸ್ತಿ ತಂತ್ರಾಂಶದಲ್ಲಿಯೂ ಇವುಗಳನ್ನು ಅಧಿಕೃತ ಆಸ್ತಿಗಳೆಂದೇ ಪರಿಗಣಿಸಲಾಗಿ ಈ ಆಸ್ತಿಗಳಿಗೆ ಯಾವುದೇ ದಾಖಲಾತಿಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವ ಅವಶ್ಯಕತೆ ಇರುವುದಿಲ್ಲ. ಆದರೆ ಇತರ ಯಾವುದೇ ಆಸ್ತಿಗಳನ್ನು ಅಧಿಕೃತವೆಂದು ಮಾಡಬೇಕಾದರೆ ಮುಂದೆ ತಿಳಿಸಿದ ದಾಖಲೆಗಳನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕಿರುತ್ತದೆ. ಸರ್ವೆಯಾದ ನಂತರ ಆಸ್ತಿಗಳ ಮಾಹಿತಿಯಲ್ಲಿ ಬದಲಾವಣೆಯಾಗಿರುವ ಸಂಭವವಿದ್ದು, ಈ ಕೆಳಗೆ ತಿಳಿಸಿದ ವಿವಿಧ ರೀತಿಯ ತಿದ್ದುಪಡಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಇ-ಆಸ್ತಿ ತಂತ್ರಾಂಶದಲ್ಲಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

- ಆಸ್ತಿಗಳ ಸ್ವರೂಪ, ಅಳತೆ ಮತ್ತು ಮಾಲೀಕತ್ವದ ವಿವರಗಳನ್ನು ತಿದ್ದುಪಡಿ ಮಾಡಬಹುದಾಗಿದೆ.
- ಆಸ್ತಿಗಳು ವಿಭಾಗವಾಗಿದ್ದಲ್ಲಿ ಮೊದಲನೆ ಆಸ್ತಿಗೆ ಇರುವ ಆಸ್ತಿ ಗುರುತಿನ ಸಂಖ್ಯೆಯನ್ನು ಉಳಿಸಿಕೊಂಡು ನಂತರ ಕ್ರಮವಾಗಿ ಬರುವ ಆಸ್ತಿಗಳಿಗೆ ಹೊಸದಾಗಿ ಆಸ್ತಿ ಗುರುತಿನ ಸಂಖ್ಯೆಗಳನ್ನು ನೀಡಿ ಆಸ್ತಿಗಳ ಮಾಹಿತಿಯನ್ನು ತಿದ್ದುಪಡಿ/ಸೇರ್ಪಡೆ ಮಾಡಬಹುದಾಗಿದೆ.

[illegible] ಆಸ್ತಿ [illegible] ಮಾಹಿತಿಯನ್ನು ಅಪ್‌ಲೋಡ್ ಮಾಡಬಹುದಾಗಿದೆ

ಆಸ್ತಿ [illegible] ಕಡ್ಡಾಯವಾಗಿ ಆಸ್ತಿಗಳ ಹಕ್ಕು [illegible] ಈ ತಂತ್ರಾಂಶದಲ್ಲಿಯೇ ಸಂಬಂಧಿಸಿದ ಪೌರಾಯುಕ್ತರ/ಮುಖ್ಯಾಧಿಕಾರಿಗಳ ಡಿಜಿಟಲ್ ಸಹಿಯುಳ್ಳ ನಮೂನೆ-3ನ್ನು ಕಡ್ಡಾಯವಾಗಿ ತಂತ್ರಾಂಶದಿಂದ ಸೃಜಿಸಿ ನಾಗರೀಕರಿಗೆ ನೀಡಲು ಸೂಚಿಸಲಾಗಿದ್ದು, ಕೈಬರಹದ ಸಹಿಯುಳ್ಳ ನಮೂನೆ-3 ನ್ನು ನಾಗರೀಕರಿಗೆ ದಿನಾಂಕ: 02-05-2016ರಿಂದ ನೀಡುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಈ ಹಿಂದೆ ಸರ್ವೆ ಮಾಡಿದ ಸಮಯದಲ್ಲಿ ಬಿಟ್ಟುಹೋದ ಅಥವಾ ಸರ್ವೆಯಾದ ನಂತರ ಹೊಸದಾಗಿ ಸೇರ್ಪಡೆಗೊಂಡ ಅಧಿಕೃತ ಮತ್ತು ಅನಧಿಕೃತವಲ್ಲದ ಆಸ್ತಿಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಸೇರಿಸಲು ಅವಕಾಶ ಕಲ್ಪಿಸಲಾಗಿದೆ. ಆಸ್ತಿಯ ಮಾಹಿತಿಯನ್ನು ದಾಖಲಿಸುವ ಸಮಯದಲ್ಲಿ ಈ ಕೆಳಗೆ ಕಾಣಿಸಿದ ಸೂಚನೆಗಳನ್ನು ಅಗತ್ಯವಾಗಿ ಪಾಲಿಸಲು ತಿಳಿಸಿದೆ.

- ಒಂದು ವೇಳೆ ಆಸ್ತಿಯು ಕಟ್ಟಡವಾಗಿದ್ದಲ್ಲಿ ಕಟ್ಟಡ ಮಾತ್ರ ಇರುವ ಫೋಟೋವನ್ನು ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು.
- ಒಂದು ವೇಳೆ ಆಸ್ತಿಯು ನಿವೇಶನವಾಗಿದ್ದಲ್ಲಿ ಪ್ರಮುಖ ಸ್ಥಳವನ್ನು (Landmark) ಒಳಗೊಂಡಿರುವ ನಿವೇಶನದ ಫೋಟೋವನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡತಕ್ಕದ್ದು. ಒಂದು ವೇಳೆ ನಿವೇಶನದ ಹತ್ತಿರ ಯಾವುದೇ ಪ್ರಮುಖ ಸ್ಥಳಗಳು ಇಲ್ಲದಿದ್ದಲ್ಲಿ ಮಾಲೀಕರು ನಿವೇಶನದಲ್ಲಿ ನಿಂತಿರುವ ಫೋಟೋವನ್ನು ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು.
- ಆಸ್ತಿಯ ಮಾಲೀಕರ ಭಾವಚಿತ್ರವನ್ನು ಪ್ರತ್ಯೇಕವಾಗಿ ಅಪ್‌ಲೋಡ್ ಮಾಡತಕ್ಕದ್ದು.
- ಋಣಗಳ ಮಾಹಿತಿಯನ್ನು ಸ್ಥಳೀಯವಾಗಿ ಸಂಬಂಧಪಟ್ಟ ಇಲಾಖೆ/ಬ್ಯಾಂಕ್‌ಗಳಿಂದ ಲಭ್ಯವಿದ್ದಲ್ಲಿ ಮಾಹಿತಿಯನ್ನು ದಾಖಲಿಸತಕ್ಕದ್ದು.
- ಚೆಕ್‌ಬಂದಿಯ ಮಾಹಿತಿಯಲ್ಲಿ ಕಡ್ಡಾಯವಾಗಿ ಆಸ್ತಿಯ ಪಕ್ಕದ ಗುರುತಿನ ಸಂಖ್ಯೆಯನ್ನು ದಾಖಲಿಸತಕ್ಕದ್ದು, ಒಂದು ವೇಳೆ ಆಸ್ತಿ ಗುರುತಿನ ಸಂಖ್ಯೆ ಲಭ್ಯವಿಲ್ಲದಿದ್ದಲ್ಲಿ ಆಸ್ತಿಯ ನಿರ್ಧರಣಾ ಸಂಖ್ಯೆಯನ್ನು ದಾಖಲಿಸತಕ್ಕದ್ದು.
- ಸ್ಥಳ ಪರಿಶೀಲನೆಯ ಸಮಯದಲ್ಲಿ ವಾಸದ ಕಟ್ಟಡವನ್ನು ಬಾಡಿಗೆಗೆ ನೀಡಿರುವುದು ಕಂಡುಬಂದಲ್ಲಿ ಕಡ್ಡಾಯವಾಗಿ ಅನುಭೋಗದಾರರ ಹೆಸರನ್ನು ತಂತ್ರಾಂಶದಲ್ಲಿ ದಾಖಲಿಸತಕ್ಕದ್ದು.
- ಆಸ್ತಿ ತೆರಿಗೆಯ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರಗಳನ್ನು ಕಡ್ಡಾಯವಾಗಿ ದಾಖಲಿಸತಕ್ಕದ್ದು, ಒಂದು ವೇಳೆ ಆಸ್ತಿ ತೆರಿಗೆಯು ಪಾವತಿಯಾಗಿದ್ದಲ್ಲಿ ಸರಿಯಾದ ಚಲನ್ ಸಂಖ್ಯೆ ಮತ್ತು ಪಾವತಿಯಾದ ದಿನಾಂಕವನ್ನು ದಾಖಲಿಸತಕ್ಕದ್ದು.

ಆಸ್ತಿಯ ಮಾಹಿತಿಗಳನ್ನು ದಾಖಲಿಸುವ ಸಮಯದಲ್ಲಿ ಈ ಕೆಳಗೆ ತಿಳಿಸಿದಂತೆ ಸೂಕ್ತ ದಾಖಲಾತಿಗಳನ್ನು ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡುವಂತೆ ಸೂಕ್ತ ಕ್ರಮವಹಿಸಲು ಸೂಚಿಸಲಾಗಿದೆ.

- **ಅಧಿಕೃತ ಆಸ್ತಿಗಳನ್ನು ತಂತ್ರಾಂಶದಲ್ಲಿ ದಾಖಲಿಸಲು ಅವಶ್ಯಕತೆ ಇರುವ ದಾಖಲಾತಿಗಳು:**

| ಕ್ರ.ಸಂ. | ವಿವರಗಳು | ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು |
|---|---|---|
| 1. | ಅನುಮೋದನೆಗೊಂಡ ಲೇಔಟ್ | 1. ಕೃಷಿಯೇತರ ಭೂಮಿಯಾಗಿ ಪರಿವರ್ತನೆಯಾದ ಆದೇಶದ ಪ್ರತಿ.<br>2. ಲೇಔಟ್ ಅನುಮೋದನೆಗೊಂಡ ಆದೇಶದ ಪ್ರತಿ<br>3. ಲೇಔಟ್ ನಕ್ಷೆ |

| | | |
|---|---|---|
| | [illegible] ಸ್ವತ್ತು [illegible] / [illegible] / [illegible] ನೋಂದಣಿಯಾದ [illegible] | [illegible] |
| [illegible] | [illegible] | 1) [illegible] ಪ್ರತಿ<br>2) [illegible] ಪ್ರತಿ |
| 7. | ಕಟ್ಟಡ ಪರವಾನಗಿ | ಕಟ್ಟಡ ಪರವಾನಗಿಯ ಪ್ರತಿ |
| 8. | ಕೈಗಾರಿಕಾ ಉದ್ದೇಶಕ್ಕೆ ಪರಿವರ್ತಿಸಿದ ಜಮೀನು | 1) ಕೃಷಿಯೇತರ ಭೂಮಿಯಾಗಿ ಪರಿವರ್ತನೆಯಾದ ಆದೇಶದ ಪ್ರತಿ.<br>2) ಲೇಔಟ್ ಅನುಮೋದನೆಗೊಂಡ ಆದೇಶದ ಪ್ರತಿ<br>3) ನಿವೇಶನಗಳನ್ನು ಬಿಡುಗಡೆ ಮಾಡಿದ ಆದೇಶದ ಪ್ರತಿ<br>4) ಹಂಚಿಕೆಯಾದ ಆದೇಶದ ಪ್ರತಿ |

ಅಧಿಕೃತವಲ್ಲದ ಆಸ್ತಿಗಳನ್ನು ತಂತ್ರಾಂಶದಲ್ಲಿ ದಾಖಲಿಸಲು ಅವಶ್ಯಕತೆ ಇರುವ ದಾಖಲಾತಿಗಳು:

ಸರ್ಕಾರಿ ಭೂಮಿ/ನಿವೇಶನವನ್ನು ಹೊರತುಪಡಿಸಿ, ಮೇಲಿನ ಯಾವುದೇ ದಾಖಲೆ ಇಲ್ಲದಿರುವ ನಿವೇಶನಗಳನ್ನು ಅಧಿಕೃತವಲ್ಲದ ಆಸ್ತಿಯೆಂದು ದಾಖಲಿಸುವುದು.

ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ಇ-ಆಸ್ತಿ ತಂತ್ರಾಂಶದಲ್ಲಿ ನಿಗದಿಪಡಿಸಿದ ಜವಾಬ್ದಾರಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಿದೆ.

| ಕ್ರ.ಸಂ | ಅಧಿಕಾರಿ/ಸಿಬ್ಬಂದಿಗಳು | ತಂತ್ರಾಂಶದಲ್ಲಿ ನಿಗದಿಪಡಿಸಿದ ಜವಾಬ್ದಾರಿಗಳು |
|---|---|---|
| 1. | ಡಾಟಾ ಎಂಟ್ರಿ ಆಪರೇಟರ್ | ನಮೂನೆ-3ರನ್ನು ಕೋರಿ ಬರುವ ಅರ್ಜಿಗಳ ವಿವರಗಳನ್ನು ದಾಖಲಿಸುವುದು, ಆಸ್ತಿ ತೆರಿಗೆ ಮಾಹಿತಿಯನ್ನು ದಾಖಲಿಸುವುದು, ಆಸ್ತಿಗಳ ಮಾಹಿತಿಯನ್ನು ದಾಖಲಿಸುವುದು/ತಿದ್ದುಪಡಿ ಮಾಡುವುದು, ಪೌರಾಯುಕ್ತರ/ಮುಖ್ಯಾಧಿಕಾರಿಗಳ ಅನುಮೋದನೆಯ ನಂತರ ಡಿಜಿಟಲ್ ಸಹಿಯುಳ್ಳ ನಮೂನೆ-3ನ್ನು ಸೃಜಿಸುವುದು, ಆಸ್ತಿಗಳ ಹಕ್ಕು ವರ್ಗಾವಣೆ ಕೋರಿ ಬರುವ ಅರ್ಜಿಗಳನ್ನು ದಾಖಲಿಸುವುದು. |
| 2. | ವಿಷಯ ನಿರ್ವಾಹಕ | ಡಾಟಾ ಎಂಟ್ರಿ ಆಪರೇಟರ್ ದಾಖಲಿಸಿದ ಮಾಹಿತಿಯನ್ನು ಮತ್ತು ದಾಖಲೆಗಳನ್ನು ಪರಿಶೀಲಿಸುವುದು. |
| 3. | ಕರವಸೂಲಿಗಾರರು | ಆಸ್ತಿ ಮಾಹಿತಿಯುಳ್ಳ ಚೆಕ್‌ಲಿಸ್ಟ್‌ನ್ನು ಸೃಜಿಸುವುದು. ವಿಷಯ ನಿರ್ವಾಹಕರು ನಿರ್ವಹಿಸಿದ ಆಸ್ತಿಗಳ ಮಾಹಿತಿಯನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯದೊಂದಿಗೆ ಕಂದಾಯ ನಿರೀಕ್ಷಕರಿಗೆ ಕಳುಹಿಸುವುದು. |
| 4. | ಕಂದಾಯ ನಿರೀಕ್ಷಕರು | ಆಸ್ತಿಗಳನ್ನು ಮಹಜರ್ ಮಾಡಿದ ಮಾಹಿತಿಯನ್ನು ದಾಖಲಿಸುವುದು ಮತ್ತು ಕರವಸೂಲಿಗಾರರು ನಿರ್ವಹಿಸಿದ ಆಸ್ತಿಗಳ ಮಾಹಿತಿಯನ್ನು ಪರಿಶೀಲಿಸಿ ತಮ್ಮ |

| | | |
|---|---|---|
| | | [illegible] ಕಳುಹಿಸುವುದು. |
| 5. | [illegible] ಅಧಿಕಾರಿ | ಕಂದಾಯ ಇನ್ಸ್‌ಪೆಕ್ಟರ್ ರವರ [illegible] ಪರಿಶೀಲಿಸಿ ತಮ್ಮ ಅಭಿಪ್ರಾಯದೊಂದಿಗೆ ಆಯುಕ್ತರು/ಪೌರಾಯುಕ್ತರು/ ಮುಖ್ಯಾಧಿಕಾರಿಗಳಿಗೆ ಕಳುಹಿಸುವುದು. |
| 6. | [illegible] | ಹೊಸದಾಗಿ ಸೇರ್ಪಡೆಗೊಂಡ ಆಸ್ತಿಗಳಿಗೆ ಆಸ್ತಿ ಗುರುತಿನ ಸಂಖ್ಯೆಯನ್ನು ನೀಡುವುದು. |
| 7 | ಪೌರಾಯುಕ್ತರು/ಮುಖ್ಯಾಧಿಕಾರಿಗಳು | ಹೊಸದಾಗಿ ಸೇರ್ಪಡೆಗೊಂಡ/ಬದಲಾವಣೆಯಾದ ಆಸ್ತಿಗಳಿಗೆ ಡಿಜಿಟಲ್ ಸಹಿಯೊಂದಿಗೆ ಅನುಮೋದಿಸುವುದು. |

ನಗರ ಸ್ಥಳೀಯ ಸಂಸ್ಥೆಗಳು ವ್ಯವಸ್ಥಿತವಾಗಿ ಆಸ್ತಿಗಳ ಮಾಹಿತಿಯನ್ನು ಸಂಗ್ರಹಿಸಿ ಈ ಮೇಲೆ ವಿವರಿಸಿದಂತೆ ಜಾಗರೂಕತೆಯಿಂದ ಆಸ್ತಿಗಳ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಿ ನಾಗರೀಕರಿಗೆ ನೀಡುವ ನಮೂನೆ-3ರಲ್ಲಿ ಎಲ್ಲಾ ಮಾಹಿತಿಗಳು ಲಭ್ಯವಾಗುವಂತೆ ಸೂಕ್ತ ಕ್ರಮವಹಿಸಲು ಸೂಚಿಸಿದೆ. ನಮೂನೆ-3ನ್ನು ನೀಡುವುದಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಸುತ್ತೋಲೆಗಳನ್ನು ಗಮನಿಸಲು ಸೂಚಿಸಿದೆ. ಒಂದು ವೇಳೆ ತಂತ್ರಾಂಶದಲ್ಲಿ ದಾಖಲಿಸಿದ ಮಾಹಿತಿಗಳಲ್ಲಿ ಯಾವುದೇ ರೀತಿಯ ತಪ್ಪೆಸಗಿರುವುದು ಕಂಡು ಬಂದಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿ/ನೌಕರರುಗಳ ಮೇಲೆ ನಿರ್ದಾಕ್ಷಿಣ್ಯವಾಗಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

<u>ಪ್ರತಿಯನ್ನು:</u>

1) ರಾಜ್ಯದ ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಯೋಜನಾ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 02 ಎಂಎನ್‌ಇ 2019-ಇ

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 17.06.2019

## ಸುತ್ತೋಲೆ

**ವಿಷಯ:** ಇ-ಆಸ್ತಿ ತಂತ್ರಾಂಶವನ್ನು 10 ಮಹಾನಗರಪಾಲಿಕೆಗಳನ್ನು ಒಳಗೊಂಡಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಳವಡಿಸಿ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:**

1. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ EODB ಪರಿಶೀಲನಾ ಸಭೆ ದಿನಾಂಕ: 23.03.2019ರ ಸೂಚನೆಗಳು.
2. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: 23350/ಡಿಎಂಎ/121/ಜಿಪಿಎಸ್/2017-18, ದಿನಾಂಕ: 05.11.2018
3. ಘನ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಸುತ್ತೋಲೆ ಸಂಖ್ಯೆ: ನಅಇ 7 ಟಿಟಿಪಿ 2017, ದಿನಾಂಕ: 22.03.2017.
4. ಈ ಕಛೇರಿಯ ಸುತ್ತೋಲೆ ಸಂಖ್ಯೆ ಪೌನಿ/ಪಿಟಿಐಎಸ್/2015-16, ದಿನಾಂಕ: 20.04.2016.
5. ನಿರ್ದೇಶನಾಲಯ ಸುತ್ತೋಲೆ ಸಂಖ್ಯೆ: ಪೌನಿ: ಬೆಂವಿ(ಬೆಂನಜಿ) 294:2003-04, ದಿನಾಂಕ: 31.05.2004
6. ನಿರ್ದೇಶನಾಲಯ ಸುತ್ತೋಲೆ ಸಂಖ್ಯೆ: ಪೌನಿ:ಸ್ವಘೋಆ: 83:2003-04, ದಿನಾಂಕ: 08.10.2003

*******

ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ಹಾಗೂ ರಾಷ್ಟ್ರೀಯ ಸೂಚ್ಯಾಂಕ ಕೇಂದ್ರದ ಸಹಯೋಗದೊಂದಿಗೆ –ಆಸ್ತಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉಲ್ಲೇಖ (4)ರನ್ವಯ ಈಗಾಗಲೇ ಅನುಷ್ಠಾನಗೊಳಿಸಲಾಗಿರುತ್ತದೆ. ತಂತ್ರಾಂಶದ ಮೂಲಕ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಧಿಕೃತ, ಅನಧಿಕೃತವಲ್ಲದ ಮತ್ತು ಅಕ್ರಮ ಆಸ್ತಿಗಳ ಮಾಹಿತಿಯನ್ನು ದಾಖಲಿಸಲು/ತಿದ್ದುಪಡಿ ಮಾಡಲು, ಆಸ್ತಿಗಳ ಮಾಲೀಕತ್ವ ಹಕ್ಕು ವರ್ಗಾವಣೆ ಮಾಡಲು ಮತ್ತು ಆಸ್ತಿ ತೆರಿಗೆ ವಹಿಯ ನಕಲನ್ನು (ನಮೂನೆ-3) ಡಿಜಿಟಲ್ ಸಹಿಯೊಂದಿಗೆ ತಂತ್ರಾಂಶದಿಂದ ಸೃಜಿಸಿ ಅಧಿಕೃತ ಮತ್ತು ಅನಧಿಕೃತವಲ್ಲದ ಆಸ್ತಿಗಳಿಗೆ ನೀಡಲು ಅವಕಾಶಕಲ್ಪಿಸಲಾಗಿರುತ್ತದೆ.

ಈ ಬಗ್ಗೆ ಉಲ್ಲೇಖ(1)ರ ಸಭೆಯಲ್ಲಿ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಚರ್ಚಿಸಿ ಇ-ಆಸ್ತಿ ತಂತ್ರಾಂಶವನ್ನು ಕಾವೇರಿ ತಂತ್ರಾಂಶದೊಂದಿಗೆ ಜೋಡನೆ ಮಾಡಲು ಹಾಗೂ 10 ಮಹಾನಗರಪಾಲಿಕೆಗಳನ್ನು ಒಳಗೊಂಡಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಆಸ್ತಿ ತಂತ್ರಾಂಶವನ್ನು ಅಳವಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ.

ಉಲ್ಲೇಖ(4)ರಲ್ಲಿ ಇ-ಆಸ್ತಿ ತಂತ್ರಾಂಶವನ್ನು ಉಪಯೋಗಿಸುವ ಕುರಿತು ನಿರ್ದೇಶನ ನೀಡಲಾಗಿರುತ್ತದೆ. ಉಲ್ಲೇಖ(1)ರ ನಿರ್ದೇಶನದಂತೆ 10 ಮಹಾನಗರಪಾಲಿಕೆಗಳನ್ನು ಒಳಗೊಂಡಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಇ-ಆಸ್ತಿ ತಂತ್ರಾಂಶದ ಮುಖೇನವೇ ಖಾತೆಗಳನ್ನು ನೀಡಲು ಮತ್ತು ಆಸ್ತಿಗಳ ಮಾಲೀಕತ್ವ ಹಕ್ಕು ಬದಲಾವಣೆಯನ್ನು ಮಾಡಲು ನಿರ್ದೇಶಿಸಿದೆ.

ಉಲ್ಲೇಖ(2) ಮತ್ತು (3)ರಲ್ಲಿ ಪೌರಾಡಳಿತ ನಿರ್ದೇಶನಾಲಯ ಮತ್ತು ಸುತ್ತೋಲೆಗಳನ್ನು ಹೊರಡಿಸಿ ನಿಯಮಬಾಹಿರವಾಗಿ ತೆರೆದಿರುವ ಖಾತೆಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ/ಯೋಜನಾ ಪ್ರಾಧಿಕಾರ/ಪುರಸಭೆ ಯೋಜನಾ ಪ್ರಾಧಿಕಾರ ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರದಿಂದ ರದ್ದುಪಡಿಸಲು/ಖಾತೆಯನ್ನು ನೀಡಬಾರದೆಂದು ಕಟ್ಟುನಿಟ್ಟಿನ ಸೂಚನೆ ನೀಡುತ್ತಾ, ಇಂತಹ ಖಾತೆಗಳನ್ನು ವಿಸ್ತರಿಸಿದಲ್ಲಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಯ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಸೂಚಿಸಿ ನಿರ್ದೇಶಿಸಲಾಗಿರುತ್ತದೆ.

ಮಹಾನಗರಪಾಲಿಕೆಗಳು ವ್ಯವಸ್ಥಿತವಾಗಿ ಆಸ್ತಿಗಳ ಮಾಹಿತಿಯನ್ನು ಸಂಗ್ರಹಿಸಿ ಈ ಮೇಲೆ ವಿವರಿಸಿದಂತೆ ಜಾಗರೂಕತೆಯಿಂದ ಆಸ್ತಿಗಳ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಿ ನಾಗರೀಕರಿಗೆ ನೀಡುವ ನಮೂನೆ-2ರಲ್ಲಿ ಎಲ್ಲಾ ಮಾಹಿತಿಗಳು ಲಭ್ಯವಾಗುವಂತೆ ಸೂಕ್ತ ಕ್ರಮವಹಿಸಲು ಸೂಚಿಸಿದೆ. ನಮೂನೆ-2ನ್ನು ನೀಡುವುದಲ್ಲಿ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಸುತ್ತೋಲೆಗಳನ್ನು ಗಮನಿಸಲು ಸೂಚಿಸಿದೆ. ಒಂದು ವೇಳೆ ತಂತ್ರಾಂಶದಲ್ಲಿ ದಾಖಲಿಸಿದ ಮಾಹಿತಿಗಳನ್ನು ಯಾವುದೇ ರೀತಿಯ ತಪ್ಪೆಸಗಿರುವುದು ಕಂಡು ಬಂದಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿ/ನೌಕರರುಗಳ ಮೇಲೆ ನಿರ್ದಾಕ್ಷಣ್ಯವಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
(ಮಹಾನಗರಪಾಲಿಕೆ-2)

**ಪ್ರತಿಯನ್ನು:**

1. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ.
2. ಮಾನ್ಯ ಜಿಲ್ಲಾಧಿಕಾರಿರವರಲ್ಲಿ ಸೂಕ್ತ ಕ್ರಮಕ್ಕಾಗಿ (ಬೆಳಗಾವಿ, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ದಾವಣಗೆರೆ, ಬಳ್ಳಾರಿ, ವಿಜಯಪುರ, ಕಲುಬುರಗಿ, ಶಿವಮೊಗ್ಗ, ಮತ್ತು ತುಮಕೂರು)
3. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಬಿವೃದ್ಧಿರವರಲ್ಲಿ ಸೂಕ್ತ ಕ್ರಮಕ್ಕಾಗಿ ಸೂಚಿಸಿದೆ. ((ಬೆಳಗಾವಿ, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ದಾವಣಗೆರೆ, ಬಳ್ಳಾರಿ, ವಿಜಯಪುರ, ಕಲುಬುರಗಿ, ಶಿವಮೊಗ್ಗ ಮತ್ತು ತುಮಕೂರು)
4. ಆಯುಕ್ತರು, ಮಹಾನಗರಪಾಲಿಕೆರವರಲ್ಲಿ ಸೂಕ್ತ ಕ್ರಮಕ್ಕಾಗಿ ಸೂಚಿಸುತ್ತಾ(ಬೆಳಗಾವಿ, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ದಾವಣಗೆರೆ, ಬಳ್ಳಾರಿ, ವಿಜಯಪುರ, ಕಲಬುರಗಿ, ಶಿವಮೊಗ್ಗ ಮತ್ತು ತುಮಕೂರು)
5. ಕಛೇರಿ ಪ್ರತಿ.

2024 INSC 990

REPORTABLE

**IN THE SUPREME COURT OF INDIA**
**CIVIL APPELLATE JURISDICTION**

**CIVIL APPEAL NO. 14604 OF 2024**
**(Arising out of SLP (C) No.36440 of 2014)**

RAJENDRA KUMAR BARJATYA AND ANOTHER ... APPELLANT(S)

VERSUS

U.P. AVAS EVAM VIKAS PARISHAD & ORS. ... RESPONDENT(S)

**CIVIL APPEAL NO. 14605 OF 2024**
**(Arising out of SLP (C) No.1184 of 2015)**

RAJEEV GUPTA AND OTHERS ... APPELLANT(S)

VERSUS

U.P. AVAS EVAM VIKAS PARISHAD & ORS. ... RESPONDENT(S)

**JUDGMENT**

**R.MAHADEVAN, J.**

**1.** Leave granted.

**2.** Challenging the final judgment and order dated 05.12.2014 passed by the High Court of Judicature at Allahabad[1] in Writ-C.No.46342 of 2013, the appellants herein, who are third parties to the proceedings, have preferred the

Signature Not Verified

[1] Hereinafter shortly referred to as "the High Court"

# List of Correspondence

| Receipt No | Issue No. | Subject | Type | Marked As | Added On | Issued On | Pages | Remarks |
|---|---|---|---|---|---|---|---|---|
| 8290324/2025/DMA-ADMIN | | ಅನಧಿಕೃತ ಕಟ್ಟಡಗಳ [illegible] | [illegible] | | [illegible] | | [illegible] | ಅನಧಿಕೃತ ಕಟ್ಟಡಗಳ [illegible] |

present appeals.

3. The aforesaid writ petition was filed by the Respondent No.1 seeking for issuance of a Writ of Mandamus to direct the Respondent Nos.2 to 4 to stop the illegal / unauthorized commercial construction on residential plot no.661/6, Shastri Nagar Yojna No.7, Meerut, and to provide police force to execute the order of demolition dated 31.05.2011 passed by the competent authority viz., Executive Engineer, Construction Division-8, U.P. Avas Evam Vikas Parishad, Sector 9, Shastri Nagar, Meerut.

4. By the judgment and order impugned herein, the High Court allowed the above writ petition with the following directions and observations:

> *(a) The District Magistrate, Meerut and the Senior Superintendent of Police Meerut shall remain present on the date and time to be notified by the petitioner-Avas Evam Vikas Parishad for the purposes of demolition of unauthorized constructions. Such demolitions must be effected on or before 31st December, 2014.*
> *(b) Criminal proceedings should be launched against respondent nos.4 and 5 as well as against the officers, who were In-charge of the office of Awas Vikas Parishad at the relevant time including the Chief Engineer and the Executive Engineer when these constructions had come up.*
> *(c) The Chief Secretary, U.P. Lucknow shall ensure that the departmental proceedings are also initiated against the officers of Awas Evam Vikas Parishad responsible for the situation, which has been created. The Housing Commissioner shall also ensure that all like nature of unauthorized constructions are similarly dealt with without any discrimination and without any favourtism. For the purpose, he shall ensure that the highest officer posted in the office of Awas Evam Vikas Parishad at Meerut is made personally responsible for giving notice to the owner/persons in possession of the unauthorized occupations. The proceedings must be decided and appropriate action be taken within two months from the date of receipt of a certified copy of this order. There should be no complaint to this Court that any person has been treated favourably in the matter of demolition of the unauthorized*

*constructions.*

*(d) We also direct the Chief Secretary, U.P. Lucknow to ensure that the district authorities at Meerut are responded to the request of Awas Evam Vikas Parishad in the matter of demolition with all promptness and with full force.*
*(e) We make it clear that all unauthorized constructions have to be dealt with in same manner."*

5. At the outset, it is imperative to note the relevant background facts leading to the present litigation. The Respondent No.5 by name, Veer Singh was originally allotted a plot bearing No.661/6, situated in Bhoomi Vikas, Grisathan Yojna No.7, Sector No.6, Phase-I, Shastri Nagar, Meerut, U.P.[2] by the Respondent No.1 on 30.08.1986. Possession was also handed over to him on 15.06.1989. In respect of the subject property, the Respondent No.1 executed a freehold deed dated 06.10.2004 in favour of the Respondent No.5 with specific condition that the property shall be used only for residential purposes. Contrary to the same, the Respondent No.5 with the assistance of his power of attorney agent by name, Vinod Arora i.e., Respondent No.6, started raising illegal commercial construction on the subject property without obtaining any sanction / approval from the Respondent No.1. Though show cause notices were issued to him, he neither responded to the same nor took any steps against the illegal construction, which compelled the competent authority to pass the order of demolition of the illegal / unauthorized construction on the subject property on 31.05.2011. However, the Respondent No.1 was unable to execute the said

[2] Hereinafter shortly referred to as the "subject property"

order, due to lack of co-operation from the local as well as police authorities. Therefore, they preferred the Writ Petition bearing No.46342 of 2013, which was allowed by the High Court, by order dated 05.12.2014, which is assailed in these appeals by the appellants herein, who are the owners of the commercial shops, which are stated to have been illegally / unauthorizedly constructed on the subject property by the Respondent Nos.5 and 6.

6. The common submissions made by the learned counsel appearing for the appellants in these appeals are that admittedly, shops in the subject property have been in existence for the past 24 years; and the Respondent No.1 had converted the subject property from leasehold to freehold by the registered document dated 06.10.2004 on "As is where is basis" and as per clause 6(a) of the said deed, the Respondent No.1 had accepted the construction made on the subject property and they were fully aware of the same from its inception. That apart, through registered sale deeds, all the appellants herein had purchased the shops constructed on the subject property for valuable consideration and have been occupying the premises since then and earning their livelihood. However, the Respondent No.1 without issuing notice under section 82 of the U.P. Avas Evam Vikas Parishad Adhiniyam, 1965[3] to the appellants, erroneously took steps to demolish the entire construction in the subject property by treating the same as illegal and unauthorized one and also obtained the demolition order

[3] For short, "the Act"

from the High Court, which is arbitrary, illegal and in violation of the principles of natural justice. In support of the same, the learned counsel placed reliance on the decision of this Court in *Municipal Corporation, Ludhiana v. Inderjeet Singh*[4], wherein, demolition of commercial property was carried out by Municipal Corporation, without serving proper notice on the respondent i.e., notice was served on a dead person and in such circumstances, it was observed by this Court that '*had a proper show cause notice been served upon the first respondent, he could have shown that the alleged violation of the provisions of the Act is of negligible character, which did not warrant an order of demolition.*'

**6.1.** Elaborating further, the learned counsel for the appellants submitted that without issuing notice to the appellants and occupants of the shops, the High Court has ordered demolition of the entire construction in the subject property. According to the learned counsel, the High Court, before ordering demolition, should have directed the authorities to explore the possibility of regularizing the alleged illegal construction in the subject property. It is also submitted by the learned counsel that there were initially about 15 to 20 shops and now, there are more than 600 commercial establishments run in the area earmarked as 'Central Market', but the Respondent No.1 failed in its statutory duty to keep pace with the booming development and therefore, this situation has arisen. It is further

---

[4] (2008) 13 SCC 506

alleged that the Respondent No.1 adopted a pick and choose policy, whereby the construction made on the subject property was cherry picked for demolition, whereas in the entire vicinity of the Central market, buildings like this have blossomed and mushroomed. The learned counsel ultimately, submitted that the right of the Respondent No.1 to seek demolition is barred by delay and laches and they were negligent and acted hand in glove with the people responsible for such sorry state of affairs and that, in terms of Sections 92 to 94 r/w Sections 3, 7 and 8 of the Act, the State Government has full rights and control over the Respondent No.1, but they failed to exercise the same in proper perspective. Resultantly, due to no fault on the part of the appellants, their valuable rights are jeopardized and prejudiced at the hands of the Respondent No.1, who are acting in collusion and connivance with dishonest builders and land grabbers. Stating so, the learned counsel prayed to set aside the impugned order passed by the High court and allow these appeals.

7. On the other hand, the learned counsel appearing for the Respondent No.1 made detailed submissions reiterating the averments stated in the counter affidavit. According to him, U.P. Avas Evam Vikas Parishad viz., Respondent No.1 is the Housing Board of the State of Uttar Pradesh, an autonomous body created under the statute and governed by the U.P. Avas Evam Vikas Parishad

Adhiniyam, 1965[5]. With a view to eliminate housing problem and have a planned development in the District of Meerut, they floated a scheme called "Shastri Nagar Yojna No.7". In the said scheme, plots were carved out and categorized as residential and commercial as per usage. The residential plots could be used only for constructing the residential house and no commercial activity was permitted on the said plots. However, the Respondent No.5 started raising illegal commercial construction on the plot allotted to him, without obtaining any sanction from the competent authority. Though the Respondent No.1 sent show cause notices / communication to the Respondent No.5 to stop the illegal construction and get the same regularized, the Respondent No.5 did not respond to the same and he continued to construct the shops for commercial purposes. Therefore, the competent authority rightly passed the order of demolition of the unauthorized construction. But the said order was not enforced by the Respondent No.1, due to non-co-operation of the local as well as police authorities. Finally, the Respondent No.1 approached the High Court by filing the writ petition stating that the subject property was patently in violation of the statutory provisions applicable and it has to be demolished. The High Court after taking note of the facts and circumstances of the case, rightly passed the impugned order, which need not be interfered with by this Court.

**7.1.** In reply to the contentions raised on the side of the appellants, the learned counsel for the Respondent No.1 made the following submissions:

---

[5] For short, "the Act"

(i) The Respondent No.5 got the property converted from leasehold to freehold on the basis of the fabricated construction completion certificate.

(ii) Unauthorized construction was made only by the original allottee i.e., Respondent No.5 and not the appellants. Further, the Respondent No.1 did not know about the change of interest *qua* the subject property as it was never intimated to them. Moreover, the appellants were aware of the unauthorized construction and notices issued to stop the same, at the time of purchasing the shops itself. In such circumstances, there was no need for the appellants to be arrayed as parties before the High Court in adherence to the principles of natural justice.

(iii) The Respondent No.1 from the year 1990 onwards had served several notices on the Respondent No.5, directing him to stop the unauthorized construction, but he never paid heed to any of the notices and continued to raise the unauthorized construction. Therefore, it is incorrect to state that the Respondent No.1 lost its right to demolish the said unauthorized construction on the ground of delay and laches.

(iv) The appellants' right over the shops was created in pursuance of the change in usage of plot and unauthorized construction raised by the original allottee, which was never approved by the Respondent No.1 and therefore, in no way, their rights are being infringed by the Respondent No.1. Further, it cannot be said that the action of the Respondent No.1 is barred by the principles of acquiescence and estoppel.

(v) The violations made by Respondent No.5 are deliberate, designed and motivated and it is not a case where the violations are marginal or insignificant or that it had crept in accidentally. It is only after complying with all the requirements of law that a violation would qualify for regularization. Therefore, there is no illegality or infirmity in the order of the High Court directing demolition of the unauthorized construction.

(vi) Nevertheless, the appellants always have a remedy to sue the Respondent No.5 for return of money and/or damages.

(vii) After carrying out all kinds of development activities in different sectors of the Scheme, the Respondent No.1 allotted commercial properties, wherever required, by way of auction sale and commercial activities are taking place on such properties and therefore, it is wrong to state that the Respondent No.1 failed in its duty to provide planned development in the area.

(viii) An illegal act, more so, when it was done deliberately, does not become legal only because certain length of time has passed.

Thus, it is submitted by the learned counsel that the appeals filed by the appellants may be dismissed by this Court.

**8.** The learned counsel for the Respondent Nos.2 to 4 made his submissions supporting the case of the Respondent No.1 in entirety. Placing reliance on the counter affidavit filed by the respondent authorities, it is submitted by the learned counsel that they are ready to provide all the protection and facilities to the Respondent No.1 to demolish the unauthorized construction as ordered by

the High Court. Therefore, the learned counsel prayed for appropriate orders in these appeals.

9. During the pendency of these appeals, the Respondent No.5 died, his legal heirs were brought on record as Respondent Nos.5.1 to 5.6, and the cause title was accordingly amended. Despite the service of notice, none appeared on behalf of the legal heirs of the deceased Respondent No.5. *Qua* the Respondent No.6, who also died during the pendency of these appeals, it was recorded by this Court on 24.03.2022[6] in SLP(C)No.36440 of 2014 that considering the status of the parties and the subject matter in issue, there was no requirement to substitute the legal representatives of the deceased Respondent No.6. In such circumstances, we have to examine the stand of the Respondent No.5 as was placed before the High Court. It was stated by the Respondent No.5 therein that after allotment, the Respondent No.5 executed a power of attorney in respect of the subject property in favour of the Respondent No.6, who raised the illegal / unauthorized commercial construction on the same. He categorically admitted that the construction was made without any sanctioned map / plan by the Respondent No.6. However, he has no objection, if the construction is demolished and he shall not claim any compensation from the Respondent

[6] It has been pointed out that respondent No. 6 in these petitions, Shri Vinod Arora S/o Late K.L. Arora, has expired. It has also been pointed out that he has been a party in these matters in his capacity as power of attorney holder of the other private i.e., respondent No. 5.
Looking at the status of the parties and the subject matter of these petitions, as at present, we see no reason to require substitution of legal representatives of the deceased respondent.
Learned counsel for the parties may file short notes on their submissions while also clarifying the position at site, as existing today.
List these matters for final hearing at the admission stage on 27.04.2022.

No.1. Thus, according to the Respondent No.5, the Respondent No.6 was the original owner of the shops which were constructed on the subject property on the strength of the power of attorney executed by the Respondent No.5. Whereas, it was stated by the Respondent No.6 before the High Court that it was the Respondent No.5, who had raised construction of the shops and had sold the same to the different persons.

**10.** Heard the learned counsel appearing for the appellants as well as the Respondent No.1 and the Respondent Nos.2 to 4 and also perused the materials available on record carefully and meticulously.

**11.** This Court on 17.12.2014[7] in SLP(CC) No.21102 of 2014[8], granted an order of *status quo* in respect of the shop nos.6 and 10 situated in the subject property on condition that the appellants deposit a sum of Rs.10,00,000/- on or before 23.12.2014. The said order was duly complied with by the appellants. Thereafter, as per the order dated 22.01.2015 passed by this Court, the deposited amount was kept in interest bearing account. It is revealed from the latest office report dated 18.11.2024 that amount of Rs.10,00,000/- deposited by the

[7] The notice shall be issued, subject to the petitioner depositing a sum of Rs.10,00,000/- before this Court by 23"" December, 2014.
Status quo, existing as on today, qua the Shop Nos.10 and 6, Ground Floor, Plot No.661/ 6, Bhoomi Vikas, Grisathan Yojna No. 7, Sector No.6, Phase-I, Shastri Nagar, Meerut, U.P., of the petitioner Nos.1 and 2 respectively, shall be maintained till the next date of hearing.

[8] Arising out of which is SLP(C) No.36440 of 2014

appellants in SLP(C)No.36440 of 2014, was kept in an interest-bearing Fixed Deposit with UCO Bank, Supreme Court Compound, which is being renewed from time to time and is now bearing the next date of maturity on 10.05.2025.

12. This Court also granted an order of *status quo* on 05.01.2015[9] in SLP(CC) No.21820 of 2014[10]. Subsequently, at the instance of the appellants, on 30.11.2018[11], the said order was clarified by this Court to the effect that it confined to the shops of the seven appellants in the subject property.

13. Concededly, the appellants are third parties to the writ proceedings. They have come up with these appeals stating that they are the most affected persons by the order passed by the High Court and will be deprived of their livelihood if the same is implemented. It is the principal contention of the learned counsel appearing for the appellants that the shops have been in existence for the past 24 years and the appellants are the owners of the same by virtue of the registered

---

[9] Permission to file special leave petition is granted.
Issue notice, returnable within eight weeks.
Status quo, existing as on today, shall be maintained until further orders.

[10] Arising out of which is SLP (C) No.1184 of 2015

[11] I.A. No. 98823/2017 is for seeking a clarification of the order of this Court dated 5.1.2015 so that the status quo as directed should be maintained in respect of the shops of the seven petitioners in the special leave petition.
Our attention has been drawn to the fact that an order was passed by this Court on 17.12.2014 in another special leave petition bearing SLP(C) No. 36440/2014 to that effect.
Hence, we direct that the order of status quo dated 5.1.2015 shall stand confined to the shops of the seven petitioners in plot No. 661/6 in Bhumi Vikas, Grihsthan Yojana No.7, Sector-6, Phase-I, Shastri Nagar, Meerut, U.P.
The I.A. is, accordingly, disposed of.
List the matter in the second week of January, 2019 along with SLP(C) No. 36440/2014.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ: 080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9 ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು
560001

ಸಂಖ್ಯೆ: 1650244 DMA/DEV/ KHTA/01/ 2021 ದಿನಾಂಕ:01 - 03 - 2025

## ಸುತ್ತೋಲೆ

ವಿಷಯ: ನಗರ ಸ್ಥಳೀಯ ಸಂಸ್ಥೆಗಳಿಂದ ಮಂಜೂರು ಮಾಡಲಾದ ಕಟ್ಟಡ ಪರವಾನಿಗೆ ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು ಮತ್ತು ಅನಧಿಕೃತ ಕಟ್ಟಡಗಳ ನಿರ್ಮಾಣ ತಡೆಗೆ ಅನುಸರಿಸಬೇಕಾದ ಕಾರ್ಯವಿಧಾನದ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂ: ನಅಇ 105 ಮೈಅಪ್ರಾ 2020 ದಿ:16-06-2020.
2. ಸರ್ಕಾರದ ಸುತ್ತೋಲೆ ಸಂ:ನಅಇ 28 ಬೆಮಪ್ರಾ 2018 (ಭಾಗ-1) ದಿ:28-08-2019.
3. ಸರ್ಕಾರದ ಸುತ್ತೋಲೆ ಸಂ. ನಅಇ 82 ಜಿಇಎಲ್ 2024 (ಇ) ದಿನಾಂಕ. 26.03.2024.
4. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂ:14604/2024 SLP (C) ಸಂಖ್ಯೆ:36440/2024 ರಲ್ಲಿ ನೀಡಿರುವ ಆದೇಶ ದಿನಾಂಕ:17-12-2024.

.................

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ಮತ್ತು (2)ರ ಸುತ್ತೋಲೆಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಿಯಮಿತವಾಗಿ ಸ್ಥಳ ಪರಿಶೀಲನ ಕೈಗೊಳ್ಳುವಂತೆ ಹಾಗೂ ಯಾವುದಾದರೂ ಅನಧಿಕೃತ ಬೆಳವಣಿಗೆ ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 / ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 / ಕರ್ನಾಟಕ ಮುನಿಸಿಪಲ್ ಕಾಯ್ದೆ 1964 ಅನ್ವಯ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳುವಂತೆ ಹಾಗೂ ಪ್ರತಿ 03 ತಿಂಗಳಿಗೊಮ್ಮೆ ಅನಧಿಕೃತ ಬೆಳವಣಿಗೆಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸಹ ಸೂಚಿಸಲಾಗಿರುತ್ತದೆ. ಉಲ್ಲೇಖ (03) ರ ಸುತ್ತೋಲೆಯಲ್ಲಿ ವಾಸಯೋಗ್ಯ ಪ್ರಮಾಣ ಪತ್ರ ನೀಡುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಉಲ್ಲೇಖ (4)ರಂತೆ ಘನ ಸರ್ವೋಚ್ಛ ನ್ಯಾಯಾಲಯವು ನಕ್ಷೆ ಉಲ್ಲಂಘನೆ ಮಾಡಿ/ ಅನಧಿಕೃತವಾಗಿ ನಿರ್ಮಿಸುವ ಕಟ್ಟಡಳ ವಿರುದ್ಧ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ದಿನಾಂಕ:17-12-2024 ರ ಆದೇಶದಲ್ಲಿ ವಿವರಿಸಿದ್ದು ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

" 22.Therefore, in the larger public interest, we are inclined to issue the following directions, in addition to the directives issued by this Court in Re: Directions in the matter of demolition of structures (supra):

(i) While issuing the building planning permission, an undertaking be obtained from the builder/applicant, as the case may be, to the effect that possession of the building will be entrusted and/or handed over to the owners/beneficiaries only after obtaining completion/occupation certificate from the authorities concerned.

(ii) The builder/developer/owner shall cause to be displayed at the construction site, a copy of the approved plan during the entire period of construction and the authorities concerned shall inspect the premises periodically and maintain a record of such inspection in their official records.

(iii) Upon conducting personal inspection and being satisfied that the building is constructed in accordance with the building planning permission given and

there is no deviation in such construction in any manner, the completion/occupation certificate in respect of residential / commercial building, be issued by the authority concerned to the parties concerned without causing undue delay. If any deviation is noticed, action must be taken in accordance with the Act and the process of issuance of completion/occupation certificate should be deferred, unless and until the deviations pointed out are completely rectified.

(iv) All the necessary service connections such as, Electricity, water supply, sewerage connection, etc., shall be given by the service provider / Board to the buildings only after the production of the completion/occupation certificate.

(v) Even after issuance of completion certificate, deviation / violation if any contrary to the planning permission brought to the notice of the authority immediate steps be taken by the said authority concerned, in accordance with law, against the builder / owner / occupant; and the official, who is responsible 33 for issuance of wrongful completion /occupation certificate shall be proceeded departmentally forthwith.

(vi) No permission /licence to conduct any business/trade must be given by any authorities including local bodies of States/Union Territories in any unauthorized building irrespective of it being residential or commercial building.

(vii) The development must be in conformity with the zonal plan and usage. Any modification to such zonal plan and usage must be taken by strictly following the rules in place and in consideration of the larger public interest and the impact on the environment.

(viii) Whenever any request is made by the respective authority under the planning department/local body for co-operation from another department to take action against any unauthorized construction, the latter shall render immediate assistance and co-operation and any delay or dereliction would be viewed seriously. The States/UT must also take disciplinary action against the erring officials once it is brought to their knowledge.

(ix) In the event of any application / appeal / revision being filed by the owner or builder against the non-issuance of completion certificate or for 34 regularisation of unauthorised construction or rectification of deviation etc., the same shall be disposed of by the authority concerned, including the pending appeals / revisions, as expeditiously as possible, in any event not later than 90 days as statutorily provided.

(x) If the authorities strictly adhere to the earlier directions issued by this court and those being passed today, they would have deterrent effect and the quantum of litigation before the Tribunal / Courts relating to house / building

constructions would come down drastically. Hence, necessary instructions should be issued by all the State/UT Governments in the form of Circular to all concerned with a warning that all directions must be scrupulously followed and failure to do so will be viewed seriously, with departmental action being initiated against the erring officials as per law.

(xi) Banks / financial institutions shall sanction loan against any building as a security only after verifying the completion/occupation certificate issued to a building on production of the same by the parties concerned.

(xii) The violation of any of the directions would lead to initiation of contempt proceedings in addition to the prosecution under the respective laws".

ಘನ ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿನ ಅಂಶಗಳನ್ನು ಪಾಲಿಸಲು ಅನಧಿಕೃತ ಕಟ್ಟಡ ನಿರ್ಮಾಣ ಮತ್ತು ನಕ್ಷೆಗಳ ಉಲ್ಲಂಘನೆ ತಡೆಗೆ ಕೆಳಕಂಡ ಅಂಶಗಳನ್ನು ಅನುಸರಿಸುವುದು.

1. ನಿರ್ಮಾಣದಾರರು/ಮಾಲೀಕರು ಸ್ವತ್ತಿಗೆ ಸಂಬಂಧಿಸಿದಂತೆ ಪಾಲಿಕೆ/ನಗರ ಸ್ಥಳೀಯ ಸಂಸ್ಥೆ ವತಿಯಿಂದ ಅಗತ್ಯ ಮಂಜೂರಾತಿ/ಪರವಾನಗಿ ಪಡೆದು ಅದರಂತೆ ಕಟ್ಟಡ ನಿರ್ಮಾಣ ಕೈಗೊಂಡು ಪೂರ್ಣತಾ ಪ್ರಮಾಣ ಪತ್ರ /ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರವಷ್ಟೆ ಹಂಚಿಕೆದಾರರಿಗೆ/ ಖರೀದಿದಾರರಿಗೆ ಕಟ್ಟಡ/ಘಟಕಗಳನ್ನು ವರ್ಗಾಯಿಸುವುದಾಗಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ. ಇದರಂತೆ ನಕ್ಷೆ ಮಂಜೂರಾತಿ ಸಂದರ್ಭದಲ್ಲಿ ಪ್ರಮಾಣ ಪತ್ರ ಪಡೆದು ನಕ್ಷೆ ಮಂಜೂರಾತಿ ನೀಡುವುದು.
2. ನಿರ್ಮಾಣದಾರರು/ಮಾಲೀಕರು ಸ್ವತ್ತಿಗೆ ಸಂಬಂಧಿಸಿದಂತೆ ಪಾಲಿಕೆ/ನಗರ ಸ್ಥಳೀಯ ಸಂಸ್ಥೆ ವತಿಯಿಂದ ಮಂಜೂರಾದ ನಕ್ಷೆಯ ಪ್ರತಿಯನ್ನು ನಿರ್ಮಾಣದ ಸ್ಥಳದಲ್ಲಿ ಪ್ರದರ್ಶಿಸುವುದು. ಪ್ರಾಧಿಕೃತ ಅಧಿಕಾರಿಯು ನಿಯಮಿತವಾಗಿ ಸ್ಥಳ ಪರಿಶೀಲನಾ ಕೈಗೊಳ್ಳುವುದು ಮತ್ತು ಸ್ಥಳ ಪರಿಶೀಲನಾ ವರದಿಯ ವಿವರಗಳನ್ನು ಕಡತದಲ್ಲಿ ದಾಖಲಿಸುವುದು.
